# ಎರಡನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ

ದಿನಾಂಕ 13 ನೇ ಜುಲೈ ಮಾಹೆ 2023 ನೇ ಇಸವಿ.

## ಕ್ರಿಮಿನಲ್ ಮೊಕದ್ದಮೆ ನಂಃ 333/2023

ರಾಜ್ಯ ಸರ್ಕಾರದ ಪರವಾಗಿ

ಠಾಣಾಧಿಕಾರಿ,
ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆ,
ಕಾರ್ಕಳ, ಉಡುಪಿ ಜಿಲ್ಲೆ. ... ಫಿರ್ಯಾದುದಾರರು

-ವಿರುದ್ಧ-

ಆಶ್ರೀತ್ ಅವಿನಾಶ್ ಡೊಡ್ರೆ ಅಲಿಯಾಸ್ ಅರ್ಶದ್
ಪ್ರಾಯಃ 21 ವರ್ಷಗಳು,
ತಂದೆಃ ಜುನುಲ್ ಮನ್ಮಥ ಡೊಡ್ರೆ,
ವಾಸಃ ಎಲ್ ಪ ಜಿ ಅಪಾರ್ಟ್ಮೆಂಟ್ ಸಿ 43,
ಎಂಎಪಿಎಸ್ ಕಾಲೇಜು, ವ್ಯಾಸನಗರ,
ಮಂಗಳೂರು ಸಿಟಿ, ಮಂಗಳೂರು

ಖಾಯಂ ವಿಳಾಸಃ
ಜೋರಾಬಿ ಮನೆ,
1 ನೇ ಕ್ರಾಸ್, ಬದ್ರಿಯಾ ಹೌಸ್,
ಯೋಜನಾ ನಗರ, ಯಡ್ತಾರೆ,
ಬೈಂದೂರು ತಾಲೂಕು, ಉಡುಪಿ ... ಆರೋಪಿ

## ದೋಷಾರೋಪಣೆ

ಶ್ರೀಮತಿ ಕೋಮಲ ಆರ್. ಸಿ. ಬಿ.ಎ., ಎಲ್ಎಲ್.ಬಿ., ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

ಆರೋಪಿಯಾದ ನೀವು, ದಿನಾಂಕ 13.11.2022 ರಂದು ಬೆಳಗ್ಗಿನ ಜಾವ 4.30 ಗಂಟೆಗೆ ಸಾಕ್ಷಿ-18 ನೇಯವರ ನೊಂದಾಣೆ ಮಾಲಕತ್ವದ ಹೋಂಡಾ ಆ್ಯಕ್ಟೀವಾ ಸ್ಕೂಟರ್ ನೊಂದಾಣೆ ಸಂಖ್ಯೆ ಕೆಎ-20-ಇಕೆ-3084 ರಲ್ಲಿ ನಿಟ್ಟೆ ಗ್ರಾಮದ ಬಾಬಕ್ಕ

ಕಾಂಪ್ಲೆಕ್ಸ್ ನಲ್ಲಿರುವ ಕೆಳ ಅಂತಸ್ತಿನ ಕೊಠಡಿ ಸಂಖ್ಯೆ 6 ರ ಡೋರ್ ನಂಬ್ರ 8-155(6) ರಲ್ಲಿ ಸಾಕ್ಷಿ-1 ನೇಯವರ ಬಾಬ್ತು ಸ್ವಸ್ತಿಕ್ ಎಂಟರ್ ಪ್ರೈಸಸ್ ಎಂಬ ಹೆಸರಿನ ದಿನಸಿ ಅಂಗಡಿಗೆ ಬಂದು, ಅಂಗಡಿಯ ಕಬ್ಬಿಣದ ಶೆಟರಿನ ಬೀಗವನ್ನು ಸ್ಪಾನರಿನಿಂದ ಬಲತ್ಕಾರವಾಗಿ ಮುರಿದು ಶಟರನ್ನು ತೆರೆದು ಅಕ್ರಮವಾಗಿ ಒಳಪ್ರವೇಶಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 457 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ, ಆರೋಪಿಯಾದ ನೀವು ಮೇಲೆ ಹೇಳಿದ, ದಿನ, ಸಮಯ ಹಾಗೂ ಸ್ಥಳದಲ್ಲಿ ಸಾಕ್ಷಿ-1 ನೇಯವರ ಬಾಬ್ತು ಸ್ವಸ್ತಿಕ್ ಎಂಟರ್ ಪ್ರೈಸಸ್ ಅಂಗಡಿಯ ಒಳಗಡೆ ಡ್ರಾವರಿನಲ್ಲಿ ಇದ್ದ ಮತ್ತು ದೇವರ ಸ್ಟ್ಯಾಂಡ್ ನ ಮೇಲೆ ಡಬ್ಬದೊಳಗೆ ಇಟ್ಟಿದ್ದ ಒಟ್ಟು ರೂ.8,000/- ನಗದನ್ನು ಕಳುವು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯ ವಿವರಣೆಯನ್ನು ಆಪಾದಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಓದಿ ಹೇಳಿ, ವಿವರಿಸಿ ನಂತರ ಅವರು ನೀಡಿದ ಯಥಾವತ್ ಹೇಳಿಕೆಯನ್ನು ಬರೆದುಕೊಳ್ಳಲಾಯಿತು).

ಎ ಹೆ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ.,
ಕಾರ್ಕಳ.

**ಎರಡನೇ ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ**

ದಿನಾಂಕ **13** ನೇ ಜುಲೈ ಮಾಹೆ **2023** ನೇ ಇಸವಿ.

**ಕ್ರಿಮಿನಲ್ ಮೊಕದ್ದಮೆ ನಂಃ 333/2020**

ರಾಜ್ಯ ಸರ್ಕಾರದ ಪರವಾಗಿ

ಠಾಣಾಧಿಕಾರಿ,
ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆ,
ಕಾರ್ಕಳ, ಉಡುಪಿ ಜಿಲ್ಲೆ. ... ಫಿರ್ಯಾದುದಾರರು

-ವಿರುದ್ಧ-

ಆಶ್ರೀತ್ ಅವಿನಾಶ್ ಡೊಡ್ರೆ ಅಲಿಯಾಸ್ ಅರ್ಶದ್
ಪ್ರಾಯಃ **21** ವರ್ಷಗಳು,
ತಂದೆಃ ಜುನುಲ್ ಮನ್ಮಥ ಡೊಡ್ರೆ, ... ಆರೋಪಿ

**ದೋಷಾರೋಪಣೆ (ಚಾರ್ಜ್)**

ಪ್ರಶ್ನೆ **1**ಃ ಈ ದಿನ ನಿಮಗೆ ಓದಿ ಹೇಳಿ ವಿವರಿಸಿದ ಮತ್ತು ನಿಮ್ಮ ಮೇಲೆ ಆರೋಪಿಸಿರುವ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆ **2**ಃ ನಾವು ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರಃ

ಮೇಲ್ಕಂಡ ವಿಚಾರಣೆಯನ್ನು ಆರೋಪಿಗೆ ನನ್ನ ಸ್ವಂತ ವಿಚಾರಣೆಯಲ್ಲಿ ಓದಿ ಹೇಳಿ ವಿವರಿಸಿ, ಅವರು ಅರ್ಥ ಮಾಡಿಕೊಂಡ ನಂತರ ಉತ್ತರಗಳನ್ನು ಮತ್ತು ಸದರಿ ಉತ್ತರಗಳು ಪೂರ್ಣವಾಗಿಯೂ ಮತ್ತು ಸತ್ಯವಾಗಿಯೂ ಇದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ **13** ನೇ ಜುಲೈ ತಿಂಗಳು **2023** ರಂದು ಮೇಲ್ಕಂಡಂತೆ ನಮೂದಿಸಿಕೊಳ್ಳಲಾಯಿತು.

ಎ. ಹೆ. ಸಿ ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.